ಇ) ದುರಸ್ತಿ ಕಾಮಗಾರಿಯನ್ನು ಅನುದಾನಕ್ಕನುಗುಣವಾಗಿ ಸಾಧ್ಯವಾದಷ್ಟು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ವಿಶ್ವಬ್ಯಾಂಕ್ ನೆರವಿನ ಬಗ್ಗೆ

226-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ (ಕುಡಿಯುವ ನೀರು ಮತ್ತು ಗ್ರಾಮೀಣಾಭಿವೃದ್ಧಿ) ವಿಶ್ವಬ್ಯಾಂಕ್ ನೆರವಿನಿಂದ ತೆಗೆದುಕೊಳ್ಳಲಿರುವ ಗ್ರಾಮೀಣ ಪ್ರದೇಶದ ಹಳ್ಳಿಗಳಾವುವು(ವಿವರ ನೀಡುವುದು) ?

ಆ) ಸದರಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು) :

ಅ) ವಿಶ್ವಬ್ಯಾಂಕಿನ ಯೋಜನೆಯು ಮೊದಲನೆಯ ಹಂತದಲ್ಲಿ 30 ಗ್ರಾಮಗಳನ್ನು ತೆಗೆದುಕೊಳ್ಳಲಾಗಿದ್ದು, ಗ್ರಾಮಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

ಕೆ.ಆರ್.ಪೇಟೆ ತಾಲ್ಲೂಕು : ಕಿಕ್ಕೇರಿ, ಸಿಂದಘಟ್ಟ, ವಿಠಲಾಪುರ, ಬೂಕಿನ ಕೆರೆ.

ಮದ್ದೂರು ತಾಲ್ಲೂಕು : ಕಾವಡ್ಲೆ, ಕೆಸ್ತೂರು, ಕೊಪ್ಪ, ಕಾಡುಕೋಡನಹಳ್ಳಿ.

ಮಳವಳ್ಳಿ ತಾಲ್ಲೂಕು : ಹಸ್ಕೂರು, ದನಗೂರು, ಪುರಿಗಾಲಿ, ಮರಕಾಲ, ಕಾಲ್ಕುಣಿ.

ಮಂಡ್ಯ ತಾಲ್ಲೂಕು : ಬೂದನೂರು, ಕೆರೆಗೋಡು, ಸಾತನೂರು, ಹೊಳಲು, ಕೋತಟ್ಟಿ.

ಪಾಂಡವಪುರ ತಾಲ್ಲೂಕು : ಹಿರೆಮರಳಿ, ಕೆನ್ನಾಲು, ಮೇಲುಕೋಟೆ, ಹಳೀಬೀಡು.

ಶ್ರೀರಂಗಪಟ್ಟಣ : ನೆರಳೆ ಕೆರೆ, ಸುಬ್ಬನಕುಪ್ಪೆ, ಮಹದೇವಪುರ, ಕೆ.ಶಟ್ಟಿಹಳ್ಳಿ.

ನಾಗಮಂಗಲ ತಾಲ್ಲೂಕು : ದೇವಲಾಪುರ, ಎ.ನಾಗತೀಹಳ್ಳಿ, ತುಪ್ಪದಮಡು, ಭೀಮನಹಳ್ಳಿ.

ಎರಡನೆ ಹಂತದ ಯೋಜನೆಯಲ್ಲಿ 70 ಹಳ್ಳಿಗಳನ್ನು ತೆಗೆದುಕೊಳ್ಳಲಾಗುವುದು.

ಆ) ವಿಶ್ವಬ್ಯಾಂಕ್‌ನಿಂದ ಯೋಜನೆಯು ಇನ್ನೂ ಆಖರಾಜು ಆಗಬೇಕು.

ಹೇಮಾವತಿ ನಾಲೆ ಕಾರ್ಯದ ಬಗ್ಗೆ

227 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲೆ ಕೆಲಸ ಯಾವಾಗ ಮುಗಿಯುವುದು?

ಆ) ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ನೀರನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :